**ಸಾಕ್ಷಿಯನ್ನು ದಿನಾಂಕಃ 17-10-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ. ಎಮ್.ಎ.ಎನ್ ವಕೀಲರವರಿಂದಃ**

ನನ್ನದು ಎಂದು ಸಾಧನೆ ಮಾಡುತ್ತಿರುವ 4 ಸೆಂಟ್ಸ್ ನನಗೆ ತಂದೆಯಿಂದ ಬಂದಿರುತ್ತದೆ. ನನ್ನ ತಂದೆ ಸದರಿ 4 ಸೆಂಟ್ಸ್ ಯಾರಿಂದಲು ಖರೀದಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸದರಿ 4 ಸೆಂಟ್ಸ್ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಾನು 1968-69 ರ ಪಹಣಿಯನ್ನು ನೋಡಿರುವುದಿಲ್ಲ. ಮೂಲತಃ ದಾವ ಆಸ್ತಿ ವಾದಿಯ ಅಜ್ಜ ಶಿವನಗೌಡನಿಗೆ ಸೇರಿತ್ತು ಎಂದರೆ ಸರಿಯಲ್ಲ. ಶಿವನಗೌಡರು ನೊಂದಯಿತ ಖರೀದಿ ಪತ್ರದ ಮುಖಾಂತರ ಹಾಲಪ್ಪ, ನಾಗಮ್ಮ, ರೇವಣಸಿದ್ದಪ್ಪ ಮತ್ತು ಕೊಟ್ರಪ್ಪ ರವರಿಗೆ ಮಾರಾಟ ಮಾಡಿರುವರು ಎಂದರೆ ನನಗೆ ಗೊತ್ತಿಲ್ಲ. ಅದೇ ಶಿವನಗೌಡ ನನ್ನ ತಂದೆಯಾದ ಶಿವಪೂಜೆ ಶಿವಪ್ಪ ಮತ್ತು ನನ್ನ ದೊಡ್ಡಪ್ಪನಾದ ಚನ್ನಬಸಪ್ಪನಿಗೆ ಒಟ್ಟು 4 ಸೆಂಟ್ಸ್ ಜಮೀನನ್ನು ನೊಂದಿಯಿತ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುವರು ಎಂದರೆ ನನಗೆ ಗೊತ್ತಿಲ್ಲ. ಆ 4 ಸೆಂಟ್ಸ್ ಪೈಕಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ತಲಾ 2 ಸೆಂಟ್ಸ್ ಹಂಚಿಕೊಂಡರು. ಆ ಪ್ರಕಾರ ಪಹಣಿ ಕೂಡ ನಿ.ಡಿ.9, 10 ಮತ್ತು 12 ರಂತೆ ದಾಖಲೆಗಳು ಆಗಿರುವುದು ಎಂದರೆ ಸರಿಯಲ್ಲ. ಆ ಪ್ರಕಾರ 2 ಸೆಂಟ್ಸ ಸ್ವಾಧೀನ ಅನುಭವದಲ್ಲಿ ಇದ್ದೆವೆ ಎಂದರೆ ಸರಿಯಲ್ಲ. ನಾವು ಕೇವಲ 2 ಸೆಂಟ್ಸ್ ಗೆ ಮಾತ್ರ ಹಕ್ಕುದಾರರು ಎಂದರೆ ಸರಿಯಲ್ಲ. ನಂತರ ಆ ವಾದಿಗೆ ಮತ್ತು ಅವರ ತಂದೆಗೆ ಗೊತ್ತಾಗದಂತೆ 1994-95 ರಲ್ಲಿ ನಮ್ಮ ಹೆಸರಿಗೆ 4 ಸೆಂಟ್ಸ್ ಪಹಣಿಯನ್ನು ಯಾವುದೇ ಆಧಾರದವಿಲ್ಲದೆ ನನ್ನ ತಂದೆಯ ಹೆಸರಿಗೆ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಮನೆಯನ್ನು ಕೂಡ ಕೇವಲ 2 ಸೆಂಟ್ಸ್ ಜಾಗದಲ್ಲಿ ಕಟ್ಟಿಕೊಂಡಿದ್ದು, 2 ಸೆಂಟ್ಸ್ ಜಾಗದಲ್ಲಿ ಮಾತ್ರ

ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ಉಳಿದ 2 ಸೆಂಟ್ಸ್ ವಾದಿಯ ಸ್ವಾಧೀನ ಅನುಭವದಲ್ಲಿ ಇದೆ ಎಂದರೆ ಸರಿಯಲ್ಲ. ವಾದಿಯ ತಂದೆ ಎಲ್ಲರಿಗೂ ಖರೀದಿ ಕೊಟ್ಟ ನಂತರ ಅವರಿಗೆ 20 ಸೆಂಟ್ಸ್ ದಾಖಲೆಯಲ್ಲಿ ಉಳಿಯಬೇಕಿತ್ತು ಆದರೆ ನಾವು ಯಾವುದೇ ಆಧಾರವಿಲ್ಲದೆ 2 ಸೆಂಟ್ಸ್ ಅನ್ನು ಹೆಚ್ಚುವರಿವಾಗಿ ಪಹಣಿ ಮಾಡಿಕೊಂಡ ಕಾರಣ ದಾಖಲೆಯಲ್ಲಿ ಕೇವಲ 18 ಸೆಂಟ್ಸ್ ಎಂದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ವಾದಿಯು 20 ಸೆಂಟ್ಸ್ ನ ನೈಜ್ಯ ಸ್ವಾಧೀನ ಅನುಭವನ್ನು ಹೊಂದಿರುವರು ಎಂದರೆ ಸರಿಯಲ್ಲ. ವಾದಿಗೆ ಗೊತ್ತಗದಂತೆ ಸುಳ್ಳು ಮಾಹಿತಿ ನೀಡಿ 4 ಸೆಂಟ್ಸ್ ಗೆ ಹಿನಾಮು ಮಂಜೂರು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪಂಚಯಾತ್ ಖಾತದಲ್ಲಿ ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾಖಳೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

17-10-2025
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 17.10.2025